International Journal of Kannada Research
www.kannadajournal.com

ISSN: 2454–5813
IJKR 2021; 7(3): 124-128
© 2021 IJKR
www.kannadajournal.com
Received: 11-05-2021
Accepted: 13-06-2021

ಡಾ ಜಿ ಈ ಅಜ್ಜಪ್ಪ
ಕನ್ನಡ ಸಹಾಯಕ ಪ್ರಾಧ್ಯಾಪಕ
ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ)
ಚಿತ್ರದುರ್ಗ ಕರ್ನಾಟಕ

Corresponding Author:
ಡಾ ಜಿ ಈ ಅಜ್ಜಪ್ಪ
ಕನ್ನಡ ಸಹಾಯಕ ಪ್ರಾಧ್ಯಾಪಕ
ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ)
ಚಿತ್ರದುರ್ಗ ಕರ್ನಾಟಕ

# ಪಂಪ ಭಾರತದಲ್ಲಿ ಕಂಡು ಬರುವ ಕುಲ-ಜಾತಿಯ ವಿಚಾರಗಳು

## ಡಾ ಜಿ ಈ ಅಜ್ಜಪ್ಪ

ಪ್ರಸ್ತಾವನೆ

ಯಾವುದೇ ಸಾಹಿತ್ಯದಲ್ಲಿ ಮಾನವನು ಬದುಕುವ ರೀತಿ ನೀತಿ, ಆಚಾರ ವಿಚಾರ ಸಂಸ್ಕೃತಿಯ ಸಮಕಾಲೀನ ಸಾಂಸ್ಕೃತಿಕ ವಿಚಾರಗಳು ಅಭಿವ್ಯಕ್ತಗೊಂಡಿರುತ್ತವೆ . ಕನ್ನಡ ಸಾಹಿತ್ಯದ ಹಿನ್ನೆಲೆಯಲ್ಲಿಯೂ ಈ ಮಾತು ಸತ್ಯವೇ ಆಗಿದೆ. ಕನ್ನಡ ಸಾಹಿತ್ಯದ ಆರಂಭದ ಕೃತಿಗಳಾದ ಕವಿರಾಜಮಾರ್ಗ,ವಡ್ಡಾರಾಧನೆ ಮುಂತಾದ ಕಾವ್ಯಗಳಲ್ಲಿ ,ಪಂಪ ಪೊನ್ನ ರನ್ನ ವಚನಕಾರರು ದಾಸರು ಮುಂತಾದ ಕವಿಗಳನ್ನೂ ಒಳಗೊಂಡಂತೆ ಹೊಸಗನ್ನಡದ ಕವಿಗಳ ಕೃತಿಗಳಲ್ಲಿಯೂ ಅವರು ಸಾಹಿತ್ಯ ರಚಿಸುವ ಕಾಲದ ಅಂದರೆ ಸಮಕಾಲೀನ ವಿಚಾರಗಳು ಅಭಿವ್ಯಕ್ತಿಯನ್ನು ಪಡೆದಿವೆ. ಈ ಹಿನ್ನೆಲೆಯಲ್ಲಿ ನಾನು ಪಂಪನ ಮಹಾಕಾವ್ಯವಾದ' ವಿಕ್ರಮಾರ್ಜುನ ವಿಜಯ 'ದಲ್ಲಿ ಕಂಡು ಬರುವ ಕುಲ-ಜಾತಿಯ ವಿಚಾರಗಳನ್ನು ಕುರಿತು ನನ್ನ ಲೇಖನದಲ್ಲಿ ಚರ್ಚಿಸಿರುವೆನು.

ಪ್ರಮುಖ ಪದಗಳು: ಕುಲ -ಜಾತಿ , ವರ್ಣ ಮತ್ತು ಜಾತಿ, ಪಂಪ ಕವಿ ವಿಕ್ರಮಾರ್ಜುನ ವಿಜಯಂ ,ಕರ್ಣ ,ಮಾನವ ಜಾತಿ ತಾನೊಂದೆ ವಲಂ ,ಕುವೆಂಪು.

### ಕುಲ-ಜಾತಿ

ಕುಲ-ಜಾತಿ ಈ ಎರಡು ಪದಗಳು ಮಾನವನು ತನ್ನ ಸಂಸ್ಕೃತಿಯನ್ನು ಕಂಡು ಕೊಂಡಾಗಿನಿಂದಲೂ ಅವನೊಟ್ಟಿಗೆ ವಿವಿಧ ವ್ಯಾಖ್ಯಾನಗಳನ್ನು ಪಡೆಯುತ್ತಾ ಸ್ವರೂಪದಲ್ಲಿ ಬದಲಾವಣೆಯನ್ನು ಹೊಂದುತ್ತಾ ಬೆಳೆದು ಬಂದಿವೆ . ಈ ಎರಡೂ ಪದಗಳು ಸಮಾಜದಲ್ಲಿ ಬದುಕುತ್ತಿರುವ ಒಂದಷ್ಟು ಜನರಿಗೆ ಶ್ರೇಷ್ಠತೆಯ ಭಾವನೆಯನ್ನು ಇನ್ನೊಂದಿಷ್ಟು ಜನರಿಗೆ ಕೀಳರಿಮೆ ಹಾಗೂ ಅವಮಾನದ ಭಾವನೆಯನ್ನು ಉಂಟು ಮಾಡುವಂತವುಗಳಾಗಿವೆ .

ಕುಲ-ಜಾತಿ ಎನ್ನುವುದು ಎಲ್ಲಾ ಕಾಲದಲ್ಲಿಯೂ ಇರುವಂತದ್ದೇ ಅನೇಕ ಕಾರಣಗಳಿಂದ ಆರಂಭವಾದ ಈ ಪದ್ಧತಿ ಆಧುನಿಕ ಸಮಾಜದಲ್ಲಿ ಮುಂದುವರೆಯುತ್ತಿರುವುದು ನಮ್ಮ ನಾಗರಿಕ ಪ್ರಜ್ಞೆಗೆ ಎಸೆದ ಸವಾಲು. ಇಂತಹ ಕುಲ-ಜಾತಿಯ ವಿಚಾರಗಳನ್ನು ಪಂಪನ ಕಾವ್ಯದ ಹಿನ್ನೆಲೆಯಲ್ಲಿ ಚರ್ಚಿಸುವುದಕ್ಕಿಂತ ಮೊದಲು ಕುಲ-ಜಾತಿ ಎಂದರೇನೆಂದು ತಿಳಿಯುವುದು ಅವಶ್ಯಕ .

### ಕುಲ

ಭೂಮಿಯ ಬೇರೆ ಬೇರೆ ಭಾಗಗಳಲ್ಲಿ ಜೀವಿಸುತ್ತಿರುವ ಜನರು ವೈವಿಧ್ಯಮಯವಾದ ಭೌತಿಕ ಗುಣ ಲಕ್ಷಣಗಳನ್ನು ಹೊಂದಿದ್ದಾರೆ.ಅವುಗಳೆಂದರೆ ಚರ್ಮದ ಬಣ್ಣ, ಮುಖಭಾವಗಳ ಆಕಾರ, ಕೂದಲಿನ ರಚನೆ, ಎತ್ತರ ಇತ್ಯಾದಿಗಳು ಒಳಗೊಂಡಿವೆ. ಭೌತಿಕ. ಗುಣಲಕ್ಷಣಗಳ ಈ ವ್ಯತ್ಯಾಸಗಳು ಕುಲವನ್ನು ಒಂದ ರಿಂದ ಒಂದನ್ನು ಪ್ರತ್ಯೇಕಿಸಿವೆ. ಇವಲ್ಲದೆ ಸಂಪ್ರದಾಯಗಳು,ಭಾಷೆ, ಸಂಸ್ಕೃತಿ ಮತ್ತು ರಾಷ್ಟ್ರೀಯತೆಗಳಿಂದಲೂ ಕುಲವನ್ನು ನಿರ್ಧರಿಸಲಾಗುತ್ತದೆ.

ಜೀವಶಾಸ್ತ್ರಜ್ಞರು ಮತ್ತು ಮಾನವಶಾಸ್ತ್ರಜ್ಞರು " ಒಂದು ಕುಲವು ಒಂದು ವರ್ಗೀಕರಣದ ಜಾತಿಯ ಪುನರ್ವಿಭಾಗವಾಗಿದ್ದು ಅದು ಭೌತಿಕ ಗುಣಲಕ್ಷಣಗಳನ್ನು ವಂಶಾನುಕ್ರಮವಾಗಿ ಪಡೆದು ಅದನ್ನು ಇತರ ಜಾತಿಯ ಜನಸಂಖ್ಯೆಯಿಂದ ಬೇರ್ಪಡಿಸುತ್ತದೆ. " ಎಂದು ವಿವರಿಸಿದ್ದಾರೆ. ಎಲ್ಲಾ ಮಾನವರು ಇತರ ಮಾನವರಂತೆ ಕಾಣುವುದಿಲ್ಲವಾದರೂ ಮತ್ತು ಜನರು ಬೇರೆಯಾಗಿ ಕಾಣುವಂತಹ ಅನೇಕ ವಿಧಾನಗಳನ್ನುನಾವು ಸ್ಪಷ್ಟವಾಗಿ ನೋಡಬಲ್ಲೆವಾದರೂ ಮಾನವ ಕುಲದಲ್ಲಿ ಎಷ್ಟು ರೀತಿಯ ವರ್ಗಗಳಿವೆ ಎಂಬ ವಿಷಯದ ಮೇಲೆ ಇನ್ನೂ ಕೂಡ ವಿಜ್ಞಾನಿಗಳು ನಿಷ್ಕೃಷ್ಟವಾಗಿ ಸಹಮತದಲ್ಲಿಲ್ಲ. ಹೀಗೆ ಕುಲಗಳು ವಿವಿಧ ಭೌತಿಕ ಗುಣಲಕ್ಷಣಗಳನ್ನು ಪಡೆದಿರುವುದರಿಂದ ನಿರ್ದಿಷ್ಟ ಕುಲಗಳು ಬುದ್ಧಿ ಶಕ್ತಿಯಲ್ಲಿ ಉತ್ಕೃಷ್ಟರೂ ಮತ್ತು ಇತರರು ಕೀಳಾದವರೂ ಎಂದು ಅನೇಕರು ನಂಬುತ್ತಾರೆ.

ಜಾತಿ

ಜಾತಿ ಎಂದರೆ ಸಾಮಾಜಿಕ ವರ್ಗೀಕರಣದ ಒಂದು ರೂಪ. ವೃತ್ತಿ ಶ್ರೇಣಿ ವ್ಯವಸ್ಥೆಯಲ್ಲಿ ಸ್ಥಾನ, ರೂಢಿಗತ ಪರಸ್ಪರ ಸಾಮಾಜಿಕ ಸಂವಹನ ಮತ್ತು ಬಹಿಷ್ಕಾರವು ಸೇರಿರುವ ಜೀವನ ಶೈಲಿಯ ಅನುವಂಶಿಕ ವರ್ಗಾವಣೆ ಇದರ ಲಕ್ಷಣಗಳಾಗಿವೆ. ಜಾತಿ ವ್ಯವಸ್ಥೆಗಳು ವಿವಿಧ ಪ್ರದೇಶಗಳಲ್ಲಿ ಇದೆಯಾದರೂ, ಕಟ್ಟುನಿಟ್ಟಾದ ಸಾಮಾಜಿಕ ಗುಂಪುಗಳಾಗಿ ಭಾರತೀಯ ಸಮಾಜದ ವಿಭಜನೆಯು ಇದರ ಮಾದರಿ ಜನಾಂಗೀಯ ಉದಾಹರಣೆಯಾಗಿದೆ. ಭಾರತೀಯ ಜಾತಿಪದ್ಧತಿಯು ಸಾಮಾಜಿಕ ಶ್ರೇಣೀಕರಣವನ್ನು ವಿವರಿಸುತ್ತದೆ. ಅವಲ್ಲದೇ ಸಾಮಾಜಿಕ ನಿರ್ಬಂಧಗಳಡಿ ಭಾರತ ಉಪಖಂಡದ ಸಾವಿರಾರು ಪಂಗಡದ ಪ್ರವರ್ಗಗಳನ್ನು ವಂಶವಾಹಿನಿಗಳ ಸಮೂಹವನ್ನು ವ್ಯಾಖ್ಯಾನಿಸುತ್ತದೆ. ಇದನ್ನೇ ಜಾತಿಗಳು ಅಥವಾ ಕೋಮುಗಳೆಂದು ಹೇಳಲಾಗುತ್ತದೆ.

ವರ್ಣ ಮತ್ತು ಜಾತಿ

ಭಾರತೀಯ ಜಾತಿ ಪದ್ಧತಿಯು ಸಾಮಾಜಿಕ ಶ್ರೇಣೀಕರಣವನ್ನು ವಿವರಿಸುತ್ತದೆ. ಪ್ರಾಚೀನ ಹಿಂದೂ ಗ್ರಂಥಗಳ ಪ್ರಕಾರ ಇಲ್ಲಿ ನಾಲ್ಕು ವರ್ಣಗಳಿವೆ. ಭಗವದ್ಗೀತೆ ಹೇಳುವಂತೆ ವರ್ಣಗಳನ್ನು ಗುಣ ಮತ್ತು ಕರ್ಮದ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ. ವೇದಗಳಲ್ಲಿ ಜಾತಿ ಪದ್ಧತಿಗೆ ಮಹತ್ವವನ್ನೇ ನೀಡಿಲ್ಲ. ವೇದಕಾಲದಲ್ಲಿ ಯಾರಿಗೂ ಯಾರ ಬಗ್ಗೆ ನಿಷೇಧವಿರಲಿಲ್ಲ. ಶೂದ್ರರನ್ನೊಳಗೊಂಡಂತೆ ವೇದಗಳನ್ನು ಕೇಳಲು ಅಥವಾ ಯಾವುದೇ ಧಾರ್ಮಿಕ ಆಚರಣೆಯಲ್ಲಿ ಭಾಗವಹಿಸಲು ಯಾವುದೇ ನಿಷಿದ್ಧವಿರಲಿಲ್ಲ. ಕಾಲಾಂತರದಲ್ಲಿ ಕೃಷಿಕ ನಾಗರಿಕತೆಯ ಅಭಿವೃದ್ಧಿಯೊಂದಿಗೆ ಈ ಪದ್ಧತಿ ಬೆಳೆಯಿತು ಹಾಗೂ ಸಾಮಾಜಿಕ ಆರ್ಥಿಕ ಶ್ರೇಣಿಯ ವರ್ಗೀಕರಣವಾಗಿ ಈ ವ್ಯವಸ್ಥೆ ಬೆಳೆಯಿತು.ಜಾತಿ ಪದ್ಧತಿಯು ಆಯಾ ಕಾಲದಲ್ಲಿ ತನ್ನ ಪ್ರಭಾವ ತೋರಿದ್ದಲ್ಲದೇ ಸಮಾಜದಲ್ಲಿ ಜಾತಿಪದ್ಧತಿಯನ್ನು ಪರಸ್ಪರ ಒಪ್ಪಿಗೆ ಇಲ್ಲದೇ ಈ ಜಾತಿ ಆಧಾರ ಪರಿಗಣಿಸಿ ಮಾಡಲಾಗುತ್ತಿತ್ತು. ಸಾಂಪ್ರದಾಯಿಕ ಆಚರಣೆಗಳಲ್ಲಿ ಭಾಗವಹಿಸುವಿಕೆ, ಆರ್ಥಿಕ ಸ್ಥಿತಿ, ಸಂಬಂಧಗಳ ಕುರಿತ ವಿಚಾರಗಳು ಉಪಜಾತಿಗಳ ಮಟ್ಟದಲ್ಲಿ ಚರ್ಚೆಗೆ ಇರುತ್ತಿದ್ದವು. ಯಾವ ವ್ಯಕ್ತಿ ಯಾವ ಜಾತಿಯಲ್ಲಿ ಜನಿಸಿದ ಮತ್ತು ಯಾವ ಜನಾಂಗದ ಸಾಮಾಜಿಕ ಸಂಬಂಧ ಪಡೆದ ಎಂಬುದು ಆತನ ಬದುಕಿನ ಪರ್ಯಂತ ಇರುವ ವಿಷಯವಾಗಿತ್ತು.ಈ ಹಿನ್ನೆಲೆಯಲ್ಲಿ ನಾನು ಪಂಪನ ಮಹಾಕಾವ್ಯವಾದ ' ವಿಕ್ರಮಾರ್ಜುನ ವಿಜಯ' ದಲ್ಲಿ ಕಂಡು ಬರುವ ಕುಲ-ಜಾತಿಯ ವಿಚಾರಗಳನ್ನು ಪ್ರಸ್ತಾಪಿಸಿದ್ದೇನೆ.

ವಿಕ್ರಮಾರ್ಜುನ ವಿಜಯ

ಕ್ರಿ. ಶ.ಹತ್ತನೇ ಶತಮಾನದ ಪಂಪನ ಕಾವ್ಯ. ಪಂಪನೇ ಹೇಳಿರುವಂತೆ ಲೌಕಿಕ ಕಾವ್ಯ. ವ್ಯಾಸರ ಮಹಾಭಾರತವನ್ನು ಕನ್ನಡದಲ್ಲಿ ಬರೆಯಲು ಹೊರಟ ಪಂಪ ಯಥಾವತ್ತಾಗಿ ಕನ್ನಡಕ್ಕೆ ತರಲಿಲ್ಲ . ಕಥೆಯ ಒಟ್ಟು ಸ್ವರೂಪಕ್ಕೆ ಭಂಗ ಬರದಂತೆ ಸಂಗ್ರಹ ರೂಪದಲ್ಲಿ ಕನ್ನಡಕ್ಕೆ ತಂದಿದ್ದಾನೆ .ಹಲವು ಮಾರ್ಪಾಡುಗಳನ್ನು ಮಾಡಿಕೊಂಡಿದ್ದಾನೆ. ಅರಿಕೇಸರಿಯನ್ನು ಅರ್ಜುನನಿಗೆ ಹೋಲಿಕೆ ಮಾಡಿರು ವುದು, ಕರ್ಣ ದುರ್ಯೋಧನರ ಪಾತ್ರಗಳ ಉನ್ನತೀಕರಣ ಮುಂತಾದ ಸಂದರ್ಭದಲ್ಲಿ ಸಮಕಾಲೀನ ಗೊಳಿಸುವ ಪ್ರಯತ್ನ ಪಂಪನಿಂದ ನಡೆದಿದೆ ."ವಾಸ್ತವವಾಗಿ ಪಂಪನಿಗೆ ಮುಖ್ಯವಾದದ್ದು ಮಹಾ ಭಾರತ ಅಲ್ಲ, ತನ್ನ ಎದುರಿನ ತನ್ನ ಕಾಲದ ಭಾರತ,ಅದರಲ್ಲಿನ ತನ್ನ ಅನುಭವ"(ಕೆ. ವಿ.ಸುಬ್ಬಣ್ಣ ಪಂಪನ ಕವಿತೆ ಅನುಸಂಧಾನಕ್ಕೆ ಹೊಸ ಮಾರ್ಗ;ಪಂಪ ಒಂದು ಅಧ್ಯಯನ, ಪುಟ. **208 )** ಸಮಕಾಲೀನ ಇತಿಹಾಸದಲ್ಲಿ ಪೌರಾಣಿಕವನ್ನು ಸಮಾಸಗೊಳಿಸಿ ಹೇಳುವುದು ಇದು ಪಂಪಭಾರತದ ರಚನಾತಂತ್ರ " ಪುರಾಣ ಮತ್ತು ಚರಿತ್ರೆಗಳನ್ನು ಹೀಗೆ ವಿಸ್ಮಯಕಾರಕವಾಗಿ ಒಂದಾದ ಮೇಲೊಂದ ರಂತೆ ಚಿಮ್ಮಿಸುತ್ತ, ಚಿತ್ರಿಸುತ್ತ , ಒಮ್ಮೆ ಪುರಾಣದ ಮೇಲೆ, ಇನ್ನೊಮ್ಮೆ ಚರಿತ್ರೆಯ ಮೇಲೆ ಅನುಕ್ರಮ ವಾಗಿ ಬಿಡು ದೀಪವನ್ನು **(search light)** ಹಾಯಿಸುತ್ತ ಒಂದು ಬಗೆಯ ನೆಳಲುಬೆಳಕಿನ ಲೋಕವನ್ನು ಸೃಷ್ಟಿಸಿ ,ನಾವು ಪುರಾಣದ ಕಥೆಯೊಂದನ್ನು ಓದುತ್ತಿರುವಂತೆಯೇ ತನ್ನ ಸಮಕಾಲೀನದಲ್ಲಿ ನಮ್ಮನ್ನು ಇಡುವ "( ಎಂ ಚಿದಾನಂದ ಮೂರ್ತಿ ಪಂಪ ಕವಿ ಮತ್ತು ಯುಗಧರ್ಮ ಪಂಪ ಒಂದು ಅಧ್ಯಯನ ಪುಟ: **275)**ಪಂಪನ ಈ ನವೀನ ತಂತ್ರ ಅಸಾಧಾರಣವಾದದಾಗಿದೆ. 'ಮಾನವ ಜಾತಿ ತಾನೊಂದೆ ವಲಂ' ಎಂದಿರುವ ಪಂಪ ಇದೇ ವೇಳೆಯಲ್ಲಿ ಅಂದಿನ ಸಮಕಾಲೀನ ಸಾಮಾಜಿಕ ವ್ಯವಸ್ಥೆಯಾದ ಕುಲ - ಜಾತಿಯ ವಿಚಾರಗಳನ್ನು ಕಾವ್ಯದಲ್ಲಿ ಅಭಿವ್ಯಕ್ತಿಗೊಳಿಸಿದ್ದಾನೆ. ಇದಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಕೆಲವು ವಿಚಾರಗಳನ್ನು ನೋಡಬಹುದು.

ಪಾಂಡವರು ಕೌರವರು ಕಲಿತ ವಿದ್ಯೆಯ ಪ್ರದರ್ಶನದ ಸಂದರ್ಭ

ಪಾಂಡವರು. ಕೌರವರು ತಾವು ಕಲಿತ ವಿದ್ಯೆಯ ಪ್ರದರ್ಶನವನ್ನು ಮಾಡುವ ಸಂದರ್ಭದಲ್ಲಿ ಅರ್ಜುನನು ತಾನು ಕಲಿತ ಬಿಲ್ವಿದ್ಯೆಯನ್ನು ಪ್ರದರ್ಶಿಸುವನು. ಅದನ್ನು ಕಂಡ ಎಲ್ಲರೂ ಜೈಕಾರ ಹಾಕುತ್ತಾ ಅರ್ಜುನನನ್ನು ಹಾಡಿ ಹೊಗಳಿದರು. ಇದೇ ಸಂದರ್ಭದಲ್ಲಿ ಅಲ್ಲಿಗೆ ಅತಿಕ್ರಮಿಸಿ ಬಂದ ಕರ್ಣನು ಅರ್ಜುನನಿಗೆ ಸಮಾನವಾದ ಬಾಣ ಕೌಶಲ್ಯವನ್ನು ತೋರಿದನು. ಮುಂದುವರಿದು ಅರ್ಜುನನನ್ನು

ಸಂಗತದಿನೀಗಳಿಂತೀ
ರಂಗಮೆ ರಣರಂಗಮಾಗೆ ಕಾದುವಮಳವಂ
ಪೊಂಗದಿದಿರ್ಚದೇಂ ಗಳ
ರಂಗಂಬೊಕ್ಕಾಡುವಂತೆ ಪೆಂಡಿರೆ ಗಂಡರ್॥

"ನಿನ್ನಲ್ಲಿ ನಿಜವಾದ ಸಾಮರ್ಥ್ಯವಿದ್ದರೆ ನಾವಿಬ್ಬರೂ ಕಾದಾಡೋಣ ಅದನ್ನು ಬಿಟ್ಟು ನೀವು ನೀವೇ ಹೊಗಳಿಕೊಳ್ಳದೆ ನನ್ನೊಂದಿಗೆ ಹೋರಾಡಿ ಗೆಲ್ಲುವ ಪ್ರಯತ್ನ ಮಾಡಿ "ಎಂದು ಯುದ್ಧಕ್ಕೆ ಆಹ್ವಾನಿಸುತ್ತಾನೆ. ಅರ್ಜುನನೂ ಯುದ್ಧಕ್ಕೆ ಸಿದ್ಧನಾಗುತ್ತಾನೆ. ಆಗ ಅಲ್ಲಿಯೇ ಇದ್ದ ದ್ರೋಣಾಚಾರ್ಯ ,ಕೃಪಾಚಾರ್ಯರು ಕರ್ಣನ ಕುಲವನ್ನು ಕುರಿತು " ನೀನು ನಿನ್ನ ತಾಯಿ ಮತ್ತು ತಂದೆಯ ಹೀನದೆಸೆಯನ್ನು ಭಾವಿಸದೆ ಈ ರೀತಿ ನುಡಿಯುತ್ತಿರುವೆ, ನಿನಗೂ ಅರ್ಜುನನಿಗೂ ಇರುವ ಸರಿಸಮಾನತೆಯಾದರೂ ಯಾವುದು?ಎಂದು ಹೀಯಾಳಿಸಿ ನುಡಿಯುತ್ತಾರೆ.

ಏವದ ಮುಳಿಸಿನ ಕಾರಣ
ಮಾವುದೊ ನೀಂ ನಿನ್ನ ತಾಯ ತಂದೆಯ ದೆಸೆಯಂ
ಭಾವಿಸದೆ ಕರ್ಣ ನುಡಿವಂ
ತಾವುದು ಸಮಕಟ್ಟು ನಿನಗಮರಿಕೇಸರಿಗಂ॥

ಅರ್ಜುನನಷ್ಟೇ ಸಮಾನವಾದ ಬಿಲ್ವಿದ್ಯೆಯನ್ನು ಪ್ರದರ್ಶಿಸಿದರೂ ಹುಟ್ಟಿನ ಮೂಲ ಅಂದರೆ ಕುಲ-ಜಾತಿಯನ್ನು ತಂದೆ ತಾಯಿಯರನ್ನು ಗುರುತಿಸಿ ಅವಮಾನಿಸುವ ,ಸಾಮರ್ಥ್ಯಕ್ಕಿಂತ ಕುಲ-ಜಾತಿಗೆ ಆದ್ಯತೆ ನೀಡುತ್ತಿದ್ದ ಆ ಮೂಲಕ ಸಾಮರ್ಥ್ಯವಿದ್ದರೂ ಅದನ್ನು ಗುರುತಿಸದೆ, ಕೆಳವರ್ಗದವರ ಬಾಯನ್ನು ಮುಚ್ಚಿಸುತ್ತಿದ್ದ,ಅಂದಿನ ಕಾಲದ ಮೇಲ್ವ ರ್ಗದ ಮನಸ್ಥಿತಿಯನ್ನು ಪಂಪ ಇಲ್ಲಿ ಚಿತ್ರಿಸಿದ್ದಾನೆ.
ಅವರ ಮಾತಿಗೆ ಮರು ಮಾತು ಕೊಡಲರಿಯದೆ 'ಪಂದೆಯಂ ಪಾವಡರ್ದಂತುಮ್ಮನೆ ಬೆವರುತ್ತು ಮಿರ್ದ ' ಎಂದು ಕರ್ಣನ ಸ್ಥಿತಿಯನ್ನು ವರ್ಣಿಸಿದ್ದಾನೆ ಕವಿ. ಇದು ಅಂದಿನ ಕಾಲದ ಕೆಳವರ್ಗದ ಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ.ಆಗ ಅಲ್ಲಿಯೇ ಇದ್ದ ದುರ್ಯೋಧನನು ಮಧ್ಯ ಪ್ರವೇಶಿಸಿ

ಕುಲಮೆಂಬುದುಂಟೆ ಬೀರಮೆ
ಕುಲಮಲ್ಲದೆ ಕುಲಮನಿಂತು ಪಿಕ್ಕದಿರಿಂ ನೀ
ಮೊಲಿದೆಲ್ಲಿ ಪುಟ್ಟಿ ಬಳೆದಿರೊ
ಕುಲಮಿರ್ದುದೆ ಕೊಡದೊಳಂ ಶರ ಸ್ತಂಭದೊಳಂ॥

ಕುಲವೆಂಬುದುಂಟೇ-ವೀರವೇ ಕುಲವಲ್ಲವೇ? ಕುಲವನ್ನು ಹೀಗೆ ಹಿಕ್ಕದಿರಿ, ನೀವೆಲ್ಲಾ ಒಲಿದು ಎಲ್ಲಿ ಹುಟ್ಟಿ ಬೆಳೆದಿರಿ?ಕುಲವೆಂಬುದು ಕುಂಭದಲ್ಲಿದೆಯೇ? ಜೊಂಡಿನಲ್ಲಿದೆಯೇ? ಎಂದು ನುಡಿದು ಕರ್ಣನನ್ನು ಈಗಲೇ ಕುಲಜನನ್ನಾಗಿ ಮಾಡಿ ತೋರಿಸುವೆನೆಂದು ತಕ್ಷಣವೇ ಕರ್ಣನನ್ನು ಅಂಗರಾಜ್ಯದ ಅಧಿಪತಿಯನ್ನಾಗಿ ಮಾಡುತ್ತಾನೆ. ಇಲ್ಲಿ ದುರ್ಯೋಧನನ ಮೂಲಕ ಅಂದಿನ ಕಾಲದಲ್ಲಿಯೂ ಸಾಮರ್ಥ್ಯಕ್ಕೆ ಮನ್ನಣೆ ಕೊಡುವವರು ಇದ್ದರು ಎನ್ನುವುದು ತಿಳಿಯುತ್ತದೆ.
ಕವಿ ಪಂಪ ದುರ್ಯೋಧನನ ಮೂಲಕ ಕುಲದ ವ್ಯಾಖ್ಯಾನ ಮಾಡುತ್ತಾನೆ. ಕುಲವೆಂಬುದುಂಟೇ? ಎಂದು ಪ್ರಶ್ನಿಸುತ್ತಾನೆ. ವೀರತನವೇ ಕುಲವಲ್ಲವೇ ಎಂದು ಕುಲದ ವಿಷಯವನ್ನು ಪ್ರಸ್ತಾಪಿಸುತ್ತಾನೆ
ಹಾಗೆಯೇ ನೀವೆಲ್ಲಾ ಎಲ್ಲಿ ಹುಟ್ಟಿ ಬೆಳೆದಿರಿ? ಎಂದು ದ್ರೋಣಾಚಾರ್ಯ ಕೃಪಾಚಾರ್ಯರ ಹುಟ್ಟಿನ ಮೂಲವನ್ನು ಕೆಣಕುತ್ತಾನೆ. ಕುಲಜನಲ್ಲದವನನ್ನು ರಾಜ್ಯಾಧಿಪತಿಯನ್ನಾಗಿ ಮಾಡುವುದರ ಮೂಲಕ ಕುಲಜನನ್ನಾಗಿ ಮಾಡಬಹುದು ಎಂದು ತೋರಿಸಿದ್ದಾನೆ.

ಭೀಷ್ಮರ ಸೇನಾಧಿಪತಿ ಪಟ್ಟದ ಸಂದರ್ಭ
ಮಹಾಭಾರತ ಯುದ್ಧದ ಆರಂಭಕ್ಕೂ ಮುನ್ನ ಭೀಷ್ಮರಿಗೆ ಸೇನಾಧಿಪತಿ ಪಟ್ಟಕಟ್ಟುವ ಸಂದರ್ಭದಲ್ಲಿ ಕರ್ಣನು
ಭಗವತಿಯೇಱುವೆಟ್ಟ ತೆರದಿಂ ಕಥೆಯಾಯ್ತಿವರೇಱು ನೀನಿದಂ
ಬಗೆದಿವರಿನ್ನುಮಾಂತಿಱಿವರೆಂದು ವಿಮೋಹಿಸಿ ವೀರಪಟ್ಟಮಂ
ಬಗೆಯದೆ ಕಟ್ಟಿದೈ ಗುರುಗಳಂ ಕುಲವೃದ್ಧರನಾಜಿಗುಯ್ದು ಕೆ
ಮ್ಮಗೆಪಗೆವಾಡಿಯೊಳು ಗಿಸಿಕೊಂಡೊಡೆಬಂದಪುದೇಂ ಸುಯೋಧನ ॥
ಅಂದರೆ ಭಗವತಿ(ದುರ್ಗಾದೇವಿ)ಯ ಯುದ್ಧದಂತೆ ಕಥೆಯಾಯ್ತು ಇವರ ಯುದ್ಧ. ನೀನಾದರೋ ಈ ಭೀಷ್ಮರಿನ್ನೂ ಆಸರದಿಂದ ಹೋರಾಡುವರೆಂದು ಭ್ರಮಿಸಿ ವ್ಯಾಮೋಹದಿಂದ ಅವರಿಗೆ ವೀರಪಟ್ಟವನ್ನು ಕಟ್ಟಿದೆ. ಗುರುಗಳನ್ನೂ ಕುಲವೃದ್ಧರನ್ನು ರಣರಂಗಕ್ಕೆಳೆದು ವ್ಯರ್ಥವಾಗಿ ಶತ್ರುಗಳ ಶಿಬಿರದಲ್ಲಿ ನಗೆಪಾಟಲಿಗೀಡು ಮಾಡಿದರೆ ಏನು ಬಂತು ಹೇಳು ಸುಯೋಧನ ಎಂದು ಹೇಳುತ್ತಾನೆ.

ಅಲ್ಲದೆ ಮುಂದುವರೆದು
ಕಟ್ಟಿದ ಪಟ್ಟಮೆ ಸರವಿಗೆ
ನೆಟ್ಟನೆ ದೊರೆ ಪಿಡಿದ ಬಿಲ್ಲೆ ದಂಟೆಂಗೆಣೆ ಕ
ಣ್ಗೆಟ್ಟ ಮುದುಪಂಗೆ ಪಗೆವರ
ನಿಟ್ಟೆಲ್ವಂ ಮುಱಿವೊಡೆನಗೆ ಪಟ್ಟಂಗಟ್ಟಾ॥

ಎನ್ನುತ್ತಾನೆ. ಕಣ್ಣುದೃಷ್ಟಿ ಮಂದವಾದ ಈ ಮುದುಕನಿಗೆ ಕಟ್ಟಿದ ಪಟ್ಟಹುಲ್ಲಿನ ಹಗ್ಗಕ್ಕೆ ಸಮ ಅವನು ಹಿಡಿದ ಬಿಲ್ಲೋ ದಂಟಿಗೆ ಸಮ ಎಂದು ಭೀಷ್ಮರ ಸಾಮರ್ಥ್ಯವನ್ನು ಗೇಲಿ ಮಾಡುತ್ತಾನೆ.ಶತ್ರುಗಳ ಬೆನ್ನು ಮೂಳೆಯನ್ನು ಮುರಿಯ ಬೇಕಾದರೆ ನನಗೆ ಪಟ್ಟಕಟ್ಟು ಸುಯೋಧನ ಎಂದು ತನ್ನ ಸಾಮರ್ಥ್ಯದ ಅರಿವನ್ನು ವೀರತನವನ್ನು ದುರ್ಯೋಧನನಿಗೆ ನೆನಪಿಸುತ್ತಾನೆ. ಮನವರಿಕೆ ಮಾಡಿಸುತ್ತಾನೆ. ಈ ಮಾತನ್ನು ಕೇಳಿ ಅಲ್ಲಿಯೇ ಇದ್ದ ದ್ರೋಣಾಚಾರ್ಯರು

ಕುಲಜರನುದ್ಧತರಂ ಭುಜ
ಬಲಯುತರಂ ಹಿತರನೀ ಸಭಾಮಧ್ಯದೊಳ್
ಗ್ಗಲಿಸಿದ ಮದದಿಂ ನಾಲಗೆ
ಕುಲಮಂ ತುಬ್ಬುವವೊಲುಱದೆ ನೀಂ ಕೆಡೆನುಡಿವೈ॥

ಎನ್ನುವರು. ಶ್ರೇಷ್ಠ ಕುಲದವರನ್ನು, ಶ್ರೇಷ್ಠ ವ್ಯಕ್ತಿಗಳನ್ನು, ಪರಾಕ್ರಮಿಗಳನ್ನು, ದುರ್ಯೋಧನನಿಗೆ ಹಿತವನ್ನು ಬಯಸುವವರನ್ನು ಈ ಸಭೆಯ ಮಧ್ಯದಲ್ಲಿ ಅಧಿಕವಾದ ಮದದಿಂದ ದೂಷಿಸುತ್ತಿರುವೆಯಲ್ಲ, ನಾಲಗೆ ಕುಲವನ್ನು ಹೇಳಿತು ಎಂಬಂತೆ ನೀನು ಹೀಯಾಳಿಸುತ್ತಿರುವೆ ಎಂದು ದ್ರೋಣಾಚಾರ್ಯರು ಕರ್ಣನನ್ನು ಜಾತಿ ಹಿಡಿದು ನಿಂದಿಸುವರು. ಆ ಮಾತಿಗೆ ಕರ್ಣನು ಕೋಪಿಸಿಕೊಂಡು

ಕುಲಮನೆ ಮುನ್ನ ಮುಗ್ಗಡಿಪಿರೇಂ ಗಳ ನಿಮ್ಮ ಕುಲಂಗಳಾಂತು ಮಾ
ರ್ಮಲೆವನನಟ್ಟಿ ತಿಂಬುವೆ ಕುಲಂ ಕುಲಮಲ್ತು ಚಲಂ ಕುಲಂ ಗುಣಂ
ಕುಲಮಭಿಮಾನಮೊಂದೆ ಕುಲಮಣ್ಮು ಕುಲಂ ಬಗೆವಾಗಳೀ
ಕಲಹದೊಳಣ್ಣ ನಿಮ್ಮ ಕುಲವಾಕುಲಮಂ ನಿಮಗುಂಟುಮಾಡುಗುಂ॥

ಕುಲವನ್ನೇ ಏತಕ್ಕೆ ಮಾತಿಗೆ ಮುಂಚೆ ಎತ್ತಿ ಮಾತನಾಡುತ್ತೀರಿ ? ನಿಮ್ಮ ಕುಲಗಳೇ ಶತ್ರು ಸೈನ್ಯವನ್ನು ಎದುರಿಸಿ ಅಟ್ಟಿಸಿಕೊಂಡು ಹೋಗಿ ತಿನ್ನುತ್ತವೆಯೇನು? ಕುಲ ಕುಲವಲ್ಲ, ಚಲವೆಂಬುದು ಕುಲ, ಗುಣವೆಂಬುದು ಕುಲ, ಅಭಿಮಾನವೆಂಬುದು ಕುಲ,ಶೌರ್ಯವೇ ಕುಲ,ನೀವು ನೋಡುತ್ತಿರಿ ಈ ಯುದ್ಧದಲ್ಲಿ ನಿಮ್ಮ ಕುಲ ನಿಮಗೆ ವ್ಯಾಕುಲವನ್ನು ಉಂಟು ಮಾಡದೇ ಬಿಡದು ಎನ್ನುತ್ತಾನೆ.

ಬಿಲ್ವಿದ್ಯೆಯ ಪ್ರದರ್ಶನದ ಸಂದರ್ಭದಲ್ಲಿ ದ್ರೋಣಾಚಾರ್ಯರು ಕರ್ಣನ ಕುಲವನ್ನು ಹಿಡಿದು ಮಾತನಾಡಿದಾಗ ಕರ್ಣನು ಹಂದೆಯನ್ನು ಹಾವು ಹಿಡಿದಂತೆ ಬೆದರುತ್ತಾನೆ. ಆದರೆ ಈಗ ಕರ್ಣನು ಈ ಮಾತುಗಳನ್ನು ಹೇಳುತ್ತಾನೆ.ಅಂದರೆ ಕುಲ- ಜಾತಿಯ ಬಗ್ಗೆ ಹೀಯಾಳಿಕೆಯ ಮಾತನ್ನು ಕೇಳಿ ಕರ್ಣನು ಈಗಾಗಲೇ ಬೇಸತ್ತು ಹೋದಂತೆ ಕಾಣುತ್ತದೆ.ಆದ್ದರಿಂದ ಈಗ ಮೊದಲಿನಂತೆ ಬೆದರದೆ ದ್ರೋಣಾಚಾರ್ಯರ ಮಾತುಗಳನ್ನು ಖಂಡಿಸುತ್ತಾ ಯಾವುದೇ ಮಾತಿಗೂ ಮುನ್ನ ಕುಲವನ್ನು ಹಿಡಿದು ಮಾತನಾಡುವ ನಿಮ್ಮ ಸ್ವಭಾವ ಸರಿಯಲ್ಲ ಎಂದು ಎಚ್ಚರಿಸುತ್ತಾನೆ. ಹಾಗಾದರೆ ಶ್ರೇಷ್ಠ ಕುಲದ ಬಗ್ಗೆ ಇರುವ ನಿಮ್ಮ ಭಾವನೆ ನಿಮ್ಮ ಶ್ರೇಷ್ಠ ಕುಲಗಳೇ ಈಗ ನಡೆಯುವ ಯುದ್ಧದಲ್ಲಿ ಶತ್ರು ಸೈನ್ಯವನ್ನು ಗೆಲ್ಲುತ್ತವೆಯೇ ಎಂದು ಪ್ರಶ್ನಿಸುತ್ತಾನೆ.ಇದೇ ರೀತಿ ಕುಲವನ್ನು ಹಿಡಿದು ಮಾತನಾಡುತ್ತಾ ಕುಳಿತರೆ ನಿಮ್ಮ ಕುಲದಿಂದ ನಿಮಗೆ ತೊಂದರೆಯಾಗದೆ ಇರುವುದಿಲ್ಲ ಎಂದು ಎಚ್ಚರಿಸುತ್ತಾನೆ. ಮುಂದುವರಿದು ಕುಲದ ವ್ಯಾಖ್ಯಾನವನ್ನು ಈ ರೀತಿ ಮಾಡುತ್ತಾನೆ.ನೀವು ಹೇಳುವ ಹುಟ್ಟಿನಿಂದ ಬರುವ ಕುಲ ಕುಲವಲ್ಲ, ನಮ್ಮಲ್ಲಿರುವ ಚಲವೆಂಬುದು ಕುಲವಾಗಬೇಕು, ನಮ್ಮ ಬಗ್ಗೆ ನಾವು ಹೊಂದಿರುವ ಅಭಿಮಾನ ನಮ್ಮ ಕುಲವಾಗಬೇಕು. ನಮ್ಮ ಗುಣ ನಮ್ಮ ಕುಲವಾಗಬೇಕು, ನಮ್ಮ ಶೌರ್ಯ ನಮ್ಮ ಕುಲವಾಗಬೇಕು, ಅಂದರೆ ಕುಲ-ಜಾತಿಗಳನ್ನು ಗುರುತಿಸುವಾಗ ವ್ಯಕ್ತಿಯ ಹುಟ್ಟಿನ ಮೂಲವನ್ನು ಗುರುತಿಸದೆ ಅವನಲ್ಲಿರುವ ಚಲ,ಗುಣ ಅಭಿಮಾನ,ಶೌರ್ಯಗಳನ್ನು ಗುರುತಿಸಬೇಕು ಎನ್ನುವುದು ಕರ್ಣನ ಮಾತು. ಕರ್ಣನ ಪಾತ್ರದ ಮೂಲಕ ಪಂಪನ ಮಾತೂ ಆಗಿದೆ.

ಕರ್ಣನ ಸಾರಥಿಯಾಗಲು ದುರ್ಯೋಧನನು ಶಲ್ಯನನ್ನು ಕೇಳಿದಾಗ

ಸೇನಾಧಿಪತಿಯಾದ ಕರ್ಣನ ಸಾರಥಿಯಾಗೆಂದು ದುರ್ಯೋಧನನು ಶಲ್ಯನನ್ನು ಕೇಳಿದಾಗ

ಪಿಂದೆ ಕಡಂಗಿ ತೇರನೆಸಗೆಂಬವನಂಬಿಗನಾಜಿ ರಂಗದೊಳ್
ಮುಂದೆ ಸಮನಾಗಿ ಬೆಸದಿರ್ಪವನುಂ ತುಱುಕಾಱನಾಗೆ ಮ
ತ್ಸ್ಯಂದನ ಚೋದನ ಕ್ರಮಮದುಂ ಪೊಲೆಯಂಗಮರ್ದಿರ್ಕುಮಂತುಟಂ
ನೀಂದಯೆಗೆಯ್ದುಂ ಪೇೞ್ದೆ ಯಿದನಾರ್ ಪಡೆವರ್ ಫಣಿರಾಜಕೇತನಾ ॥

ಹೀನಕುಲದ ಕರ್ಣನಿಗೆ ಸಾರಥಿಯಾಗಲು ಸಾಧ್ಯವಿಲ್ಲವೆಂದು ನಿರಾಕರಿಸುತ್ತಾನೆ.'ಹಿಂದೆ ಕುಳಿತು ಸಡಗರಿಸಿ ರಥವನ್ನು ನಡೆಸು ಎನ್ನುವವನು ಅಂಬಿಗ, ಯುದ್ಧರಂಗದಲ್ಲಿ ಸಮಾನ ಗತ್ತಿನಿಂದ ರಥವನ್ನು ಎದುರಲ್ಲಿ ಕುಳಿತು ನಡೆಸುವವನಾದರೋ ಗೋಪಾಲಕೃಷ್ಣ, ಕರ್ಣನಿಗಾಗಿ ನಾನು ರಥ ಓಡಿಸುವುದೆಂಬುದು ಹೊಲೆಯನಿಗೆ ಅಮೃತವನ್ನು ಬಡಿಸುವಂತೆಯೇ? ಇದನ್ನು ನೀನು ನನಗೆ ದಯಪಾಲಿಸಿದೆ ಇಂಥಹದನ್ನು ಇನ್ನು ಯಾರು ಪಡೆದಾರು ' ಎಂದು ಕರ್ಣನ ಕುಲವನ್ನು ಹಿಡಿದು ಮಾತನಾಡುವನು.

ಇಲ್ಲಿ ಶಲ್ಯನು ಕರ್ಣನ ಕುಲದ ಬಗ್ಗೆ ಹೀನ ಭಾವನೆಯನ್ನು ಹೊಂದಿರುವುದು ನಮಗೆ ತಿಳಿಯುತ್ತದೆ. ಅಂಗರಾಜ್ಯದ ಅಧಿಪತಿ, ಮಹಾಭಾರತ ಯುದ್ಧದಲ್ಲಿ ಕೌರವ ಸೈನ್ಯದ ಸೇನಾಧಿಪತಿಯಾದರೂ ಕ್ಷತ್ರಿಯನಾದ ಶಲ್ಯನು ಕರ್ಣನನ್ನು ತನ್ನ ಸಮಾನನಾಗಿ ಗುರುತಿಸದೆ

ಕ್ಷತ್ರಿಯನಾದ ನಾನು ಹೀನ ಕುಲದ ಕರ್ಣನಿಗೆ ಸಾರಥಿಯಾಗಬೇಕೇ? ಎಂದು ಪ್ರಶ್ನಿಸುತ್ತಾನೆ. ಅಂದರೆ ಹುಟ್ಟಿನ ಮೂಲದಿಂದಲೇ ವ್ಯಕ್ತಿಯನ್ನು ಗುರುತಿಸುತ್ತಿದ್ದ ವಿಚಾರ ಈ ಮೂಲಕ ಸ್ಪಷ್ಟವಾಗುತ್ತದೆ .ಆಗ ದುರ್ಯೋಧನನು ಶಲ್ಯನಿಗೆ ಹೀಗೆ ಹೇಳುತ್ತಾನೆ

ಮಣಿ ಕುಂಡಲಮುಂ ಕವಚಂ
ಮಣಿಯದ ಚಾರಿತ್ರಮುಗ್ರ ತೇಜಮುಮೀ ಯೊ
ಳ್ಗುಣಂಮುಂ ಕಲಿತನಮುಮವೇಂ
ಪ್ರಣತಾರೀ ಸೂತ ಸುತನೊಳೊಡವುಟ್ಟುಗುಮೇ ॥

ಎಲೈ ಶಲ್ಯನೇ ಮಣಿಕುಂಡಲವೂ ಕವಚವೂ ಬಗ್ಗದ ನಡತೆಯೂ ಉಗ್ರವಾದ ತೇಜಸ್ಸೂ ಈ ಒಳ್ಳೆಯ ಗುಣ ಮತ್ತು ತೇಜಸ್ಸು ಇವು ಸೂತ ಪುತ್ರನಲ್ಲಿ ಜೊತೆಯಾಗಿ ಹುಟ್ಟುತ್ತವೆಯೇ? ಸಾಧ್ಯವಿಲ್ಲ ಎನ್ನುವನು.

ಈ ಮೂರೂ ಸನ್ನಿವೇಶಗಳು ಕರ್ಣನಿಗೆ ಸಂಬಂಧಿಸಿದವು. ಕ್ಷತ್ರಿಯ ವಂಶದ ಕುಂತಿಯ ಗರ್ಭದಲ್ಲಿ ಜನಿಸಿ ಸೂರ್ಯನ ವರದಿಂದ ಜನಿಸಿದ ಪರಿಣಾಮವಾಗಿ ಸಹಜವಾಗಿ ಕರ್ಣಕುಂಡಲ ಕವಚಗಳು ದೊರೆತಿದ್ದರೂ ಅಂಬಿಗರ ಮನೆಯಲ್ಲಿ ಅಂಬಿಗರ ಮಗನಾಗಿ ಬೆಳೆಯಬೇಕಾದ ಕಾರಣದಿಂದ ಅವನ ಸಾಮರ್ಥ್ಯಗಳು ಅವನ ಕುಲದ ಹಿನ್ನೆಲೆಯಲ್ಲಿ ದುರ್ಯೋಧನನನ್ನುಬಿಟ್ಟು ಯಾರಿಂದಲೂ ಗೌರವಕ್ಕೆ ಒಳಗಾಗಲಿಲ್ಲ. ಪ್ರತಿ ಬಾರಿ ಅವನ ಸಾಮರ್ಥ್ಯವನ್ನು ಬಳಸಿ ಮಾತನಾಡಿದಾಗಲೆಲ್ಲ ಕುಲದ ವಿಚಾರಗಳು ಅವನ ಬಾಯಿ ಮುಚ್ಚಿಸುತ್ತವೆ. ಅಂದಿನ ಕಾಲದಲ್ಲಿ ಸಾಮರ್ಥ್ಯಕ್ಕಿಂತ ಕುಲ-ಜಾತಿಗೆ ಹೆಚ್ಚಿನ ಆದ್ಯತೆ ನೀಡುತ್ತಿದ್ದರು ಎಂಬುದು ಇಲ್ಲಿ ವ್ಯಕ್ತವಾಗಿದೆ.

ಕವಿ ಪಂಪ ಅಂದಿನ ಕಾಲದ ಸಮಾಜದ ಸಾಮಾಜಿಕ ರಚನೆಯಾದ ಕುಲ ಜಾತಿಯ ವಿಚಾರಗಳನ್ನು ಹೇಳುತ್ತಲೇ ಕುಲವೆಂದರೆ ಯಾವುದಾಗಬೇಕು ಎಂಬುದನ್ನು ಹೇಳಿದ್ದಾನೆ. ಆದ್ದರಿಂದಲೇ ಸಾಮರ್ಥ್ಯವಿದ್ದರೂ ಜೀವನಪೂರ್ತಿ ಕುಲದ ಬಗ್ಗೆ ಹೀಯಾಳಿಸಿ ಕೊಳ್ಳುತ್ತಲೇ ಅಂತ್ಯವನ್ನು ಕಂಡ ಕರ್ಣ ಸತ್ತಾಗ ಪಂಪನು

ನೆನೆಯದಿರಣ್ಣ ಭಾರತದೊಳಿಂ ಪೆರರಾರನುಮೊಂದೆ ಚಿತ್ತದಿಂ
ನೆನೆವೊಡೆ ಕರ್ಣನಂ ನೆನೆಯ ಕರ್ಣನೊಳಾರ್ ದೊರೆ ಕರ್ಣನೇರು
ಕ
ರ್ಣನ ಕಡು ನನ್ನಿ ಕರ್ಣನಳವಂಕದ ಕರ್ಣನ ಚಾಗಮೆಂದು ಕ
ರ್ಣನ ಪಡೆ ಮಾತಿನೊಳ್ ಪುದಿದು ಕರ್ಣ ರಸಾಯನಮಲ್ತೆ
ಭಾರತಂ ॥

ಎಂದಿರುವುದು .ಮಹಾಭಾರತದಲ್ಲಿ ಯಾರನ್ನಾದರೂ ನೆನೆಯಬೇಕೆಂದರೆ ಕರ್ಣನನ್ನು ಮಾತ್ರ ನೆನೆಯಿರಿ ಎಂದು ಹೇಳುತ್ತಾ ಅದಕ್ಕೆ ಕಾರಣಗಳನ್ನು ಕೊಡುತ್ತಾನೆ. ಕರ್ಣನ ಸಾಮರ್ಥ್ಯ ಸತ್ಯ ತ್ಯಾಗ ಇವೆಲ್ಲವೂ ಅವನ ಶ್ರೇಷ್ಠತೆಯ ಉದಾಹರಣೆಗಳಾಗಿವೆ ಎಂದು ಹೇಳುತ್ತಾನೆ. “”ಸತ್ಯ, ತ್ಯಾಗಗಳಿಂದ ಕೂಡಿ ಆದರ್ಶ ವೀರನಾದ ಕರ್ಣನು ಸತ್ಕುಲದಲ್ಲಿ ಹುಟ್ಟಿಯೂ ಹೀನ ಕುಲಜ ನೆಂಬ ಹೀನಾಯಕ್ಕೆ ಗುರಿಯಾಗಿ ಪಟ್ಟ ಪಾಡು ಕರುಳಿರಿಯುವಂಥದ್ದು” ಎನ್ನುತ್ತಾರೆ ರಂ.ಶ್ರೀ. ಮುಗಳಿಯವರು.

ಕೊನೆಯ ಮಾತು/ಉಪಸಂಹಾರ

ಕುಲ ಜಾತಿಯನ್ನು ನೋಡಿ ವ್ಯಕ್ತಿಯ ಶ್ರೇಷ್ಠತೆಯನ್ನು ಗುರುತಿಸುವ ಈ ಮನಸ್ಥಿತಿ ಪಂಪನ ಕಾಲದಿಂದ ಇಂದಿನವರೆಗೂ ಮುಂದುವರೆದುಕೊಂಡು ಬಂದಿದೆ. ಇಪ್ಪತ್ತನೆಯ ಶತಮಾನದ ಕುವೆಂಪು ಅವರ ಜಲಗಾರ ನಾಟಕದ ಒಂದು ಸನ್ನಿವೇಶ ಇದಕ್ಕೆ ಉದಾಹರಣೆ. ಜಲಗಾರ ಹಾಡುತ್ತಿರುತ್ತಾನೆ ದೂರದಿಂದ ಇದನ್ನುಕೇಳಿಸಿಕೊಂಡ ಪಾರ್ವರು ಯಾರೋ ದಿವ್ಯಾತ್ಮನಿರಬೇಕು ಮಧುರತಮ ಗಾಯನವು ಅಮಲತಮ ಹೃದಯದಿಂದಲ್ಲದೆ ಹೊರಹೊಮ್ಮಲರಿಯದು ಎಂದು ಮಾತನಾಡಿಕೊಂಡು ಹೋಗುತ್ತಿದ್ದಾಗ ಹಾಡಿದವನು ಜಲಗಾರನೆಂದು ಗೊತ್ತಾಗುತ್ತದೆ, ಆಗ ಅದೇ ಪಾರ್ವರು ಸಂಗೀತವನಿತೇನು ಮನಮೋಹಿಪುವಂತೆ ಇರಲಿಲ್ಲ. ಗಾನದೇವಿಯು ಹೀನ ಜಲಗಾರನನ್ ಒಲಿಯುವಳೇ? ಶೂದ್ರರೊಳ್ ಕವಿವರ್ಯರುದಿಸುವರೇ ಹುಟ್ಟುವರೇ ಪಂಡಿತರು ಜನಿಸುವರೆ ಶಿಲ್ಪಿಗಳ್! ಗಾಯಕರ್ ಯೋಗಿಗಳ್ ಅಸದಳಂ ಎಂದು ತಿರಸ್ಕರಿಸುತ್ತಾರೆ.ಜಾತಿಗೆ ವರ್ಣಕ್ಕೆ ಬೆಲೆ ಕೊಡುತ್ತಿದ್ದ ಮೇಲ್ವರ್ಗದ ಹೀನ ಬುದ್ಧಿಯನ್ನು ಕುವೆಂಪು ಇಲ್ಲಿ ಅನಾವರಣ ಗೊಳಿಸಿದ್ದಾರೆ. ಶೂದ್ರ ಕಲಿಯಲು ಅನರ್ಹ ಕಲಿಕೆಯಿಂದ ವಂಚಿತನಾದ ಶೂದ್ರ ಜೀವನದಲ್ಲಿ ಮಹತ್ತರವಾದುದನ್ನು ಸಾಧಿಸಲು ಸಾಧ್ಯವೇ ಇಲ್ಲ ಎಂಬ ವೈದಿಕ ಸ್ವಾರ್ಥದ ನಿಲುವನ್ನು ಪಂಪನಿಂದ ಕುವೆಂಪು ವರೆಗಿನ ಸಾಹಿತ್ಯ ಅನಾವರಣಗೊಳಿಸುತ್ತದೆ.

ಆಧಾರ ಗ್ರಂಥಗಳು

1. ರಂ.ಶ್ರೀ.ಮುಗಳಿ- ಕನ್ನಡ ಸಾಹಿತ್ಯ ಚರಿತ್ರೆ 15ನೇ ಪರಿಷ್ಕೃತ ಮುದ್ರಣ ಗೀತಾ ಬುಕ್ ಹೌಸ್ ಮೈಸೂರು 2008
2. ಡಾ ಎಲ್. ಬಸವರಾಜು- ಪಂಪನ ಸಮಸ್ತ ಭಾರತ ಕಥಾಮೃತ ದ್ವಿತೀಯ ಮುದ್ರಣ ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು 2001
3. ಕೆ.ವಿ.ಪುಟ್ಟಪ್ಪ-ಪಂಪ ಭಾರತಂ ಎಂಬ ವಿಕ್ರಮಾರ್ಜುನ ವಿಜಯಂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು 1977
4. ಪ್ರೊ.ಎಚ್.ವಿ.ಶ್ರೀನಿವಾಸ ಮೂರ್ತಿ-ಪಂಪ ಮಹಾಕವಿಯ ವಿಕ್ರಮಾರ್ಜುನ ವಿಜಯ (ಗದ್ಯಾನುವಾದ) ಕನ್ನಡ ಪುಸ್ತಕ ಪ್ರಾಧಿಕಾರ 2010